# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :: 997 |
| ಸದಸ್ಯರ ಹೆಸರು | :: ಶ್ರೀ ಅ.ದೇವೇಗೌಡ |
| ಉತ್ತರಿಸುವ ದಿನಾಂಕ | :: 21.09.2022 |
| ಉತ್ತರಿಸುವ ಸಚಿವರು | :: ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ ರೈತರು ವ್ಯವಸಾಯ ಮಾಡುವ ಜಮೀನುಗಳಿಗೆ ಹೋಗುವ ದಾರಿಯನ್ನು Easement Act 1882ರ ಪ್ರಕಾರ ಯಾವುದೇ ರೈತರು ಮತ್ತು ಇತರೆಯವರು ಅಡ್ಡಿಪಡಿಸುವಂತಿಲ್ಲ. ಆದರೆ ಕೆಲವು ರೈತರು ಅವರ ಜಮೀನಿಗೆ ಬೇಲಿ ಹಾಕಿಕೊಂಡು ಅಕ್ಕ ಪಕ್ಕದ ಜಮೀನಿನ ರೈತರಿಗೆ ವ್ಯವಸಾಯ ಮಾಡದಂತೆ ಅಡ್ಡಿಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹ ದೂರುಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರಣೆ ನೀಡುವುದು) | -ಸರ್ಕಾರದ ಗಮನಕ್ಕೆ ಬಂದಿದೆ-<br><br>ರೈತರು ಜಮೀನುಗಳಿಗೆ ಹೋಗಲು ನಕಾಶೆಯಲ್ಲಿ ಗುರುತಿಸಿರುವ ವಾಡಿಕೆ ರಸ್ತೆಗಳನ್ನು/ಕಾಲುದಾರಿಗಳನ್ನು ಮುಚ್ಚಿದ್ದಲ್ಲಿ, ಅಂತಹವರ ವಿರುದ್ಧ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ-192ರನ್ವಯ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ. ಮುಂದುವರೆದು, ರೈತರ ಹೊಲಗಳ ದಾರಿ ಸಮಸ್ಯೆಯನ್ನು ಪರಿಹರಿಸುವ ಬಗ್ಗೆ ನಿಯಮಗಳನ್ನು ರೂಪಿಸುವ ಪ್ರಸ್ತಾವನೆ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ. |
| ಆ) | ಧಾರವಾಡ ಜಿಲ್ಲೆ, ಕಲಘಟಗಿ ತಾಲ್ಲೂಕು, ಬೇಗೂರು ಗ್ರಾಮದ ಸರ್ವೇ ನಂ:76/1ರ ಜಮೀನಿನಲ್ಲಿ ವ್ಯವಸಾಯ ಮಾಡಲು ನೆರೆಯ ಜಮೀನಿನ ರೈತರು ಬೇಲಿ ಹಾಕಿ ವ್ಯವಸಾಯವನ್ನು ಮಾಡಲು ಅಡ್ಡಿ ಪಡಿಸುತ್ತಿದ್ದು, ಇಂತಹ ಅನೇಕ ಘಟನೆ ನಡೆದಿರುವ ಬಗ್ಗೆ ಸರ್ಕಾರ ಯಾವ ಕ್ರಮ ವಹಿಸಿದೆ? (ವಿವರಣೆ ನೀಡುವುದು) | ಧಾರವಾಡ ಜಿಲ್ಲೆ, ಕಲಘಟಗಿ ತಾಲ್ಲೂಕು, ಬೇಗೂರು ಗ್ರಾಮದ ಸರ್ವೇ ನಂ:76/1ರ ಜಮೀನಿನಲ್ಲಿ ವ್ಯವಸಾಯ ಮಾಡಲು ನೆರೆಯ ಜಮೀನಿನ ರೈತರು ಬೇಲಿ ಹಾಕಿ ಅಡ್ಡಿ ಪಡಿಸುತ್ತಿದ್ದು, ಇಂತಹ ಪ್ರಕರಣದ ಸರ್ವೆ ದಾಖಲೆಗಳಲ್ಲಿ ವಹಿವಾಟು ರಸ್ತೆ ಇಲ್ಲದೆ ಇರುವುದರಿಂದ ಮಾನ್ಯ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ತಹಶೀಲ್ದಾರ್, ಕಲಘಟಗಿ ಇವರು ಅರ್ಜಿದಾರರಿಗೆ ಹಿಂಬರಹ ನೀಡಿರುತ್ತಾರೆ. |

**ಸಂಖ್ಯೆ: ಕಂಇ 76 ಎಲ್‌ಜಿಟಿ 2022**

**(ಆರ್. ಅಶೋಕ್)**
**ಕಂದಾಯ ಸಚಿವರು**